# Akashvani : Bangalore
# National Bulletin In Kannada
# 03.01.2025 / 19.35 hrs

ಆಕಾಶವಾಣಿ, ಬೆಂಗಳೂರು

ರಾಷ್ಟ್ರೀಯ ವಾರ್ತೆಗಳು

ಮುಖ್ಯಾಂಶಗಳು

೧. ಜನರ ಆರೋಗ್ಯ ಕಾಪಾಡುವಲ್ಲಿ 'ಆಯುಷ್ಮಾನ್ ಭಾರತ ಯೋಜನೆ' ಪಾತ್ರ ಮಹತ್ವದ್ದು - ರಾಷ್ಟ್ರಪತಿ ದ್ರೌಪದಿ ಮುರ್ಮು

೨. ದೇಶವನ್ನು ವಿಶ್ವದ ಅತೀ ದೊಡ್ಡ ತಯಾರಿಕಾ ಕೇಂದ್ರವನ್ನಾಗಿಸಲು ಒತ್ತಾಸೆ ಪ್ರಧಾನಿ ನರೇಂದ್ರ ಮೋದಿ

೩. ದೇಶದ ೧೦೦ ಸ್ಥಳಗಳಲ್ಲಿ ಶೀಘ್ರದಲ್ಲೇ ಆಯುಷ್ ಕೇಂದ್ರಗಳ ಸ್ಥಾಪನೆ - ಸಚಿವ ಜೆ.ಪಿ.ನಡ್ಡಾ ಘೋಷಣೆ

೪. ಭಾರತ, ನವೋದ್ಯಮಗಳಿಗೆ ಅಗತ್ಯವಿರುವ ಪರಿಸರವನ್ನು ಹೊಂದಿದ ವಿಶ್ವದ ಮೂರನೇ ಅತಿ ದೊಡ್ಡ ದೇಶ- ಸಚಿವ ಪಿಯುಷ್ ಗೋಯಲ್

**<><*<><>*><>**

'ಆಯುಷ್ಮಾನ್ ಭಾರತ' ಯೋಜನೆ ಜನರ ಆರೋಗ್ಯ ಕಾಪಾಡುವಲ್ಲಿ ಮಹತ್ತರ ಪಾತ್ರ ವಹಿಸುತ್ತಿದೆ ಎಂದು ರಾಷ್ಟ್ರಪತಿ ದ್ರೌಪದಿ ಮುರ್ಮು ಹೇಳಿದ್ದಾರೆ. ಅವರು, ಬೆಳಗಾವಿಯಲ್ಲಿಂದು ಖಾಸಗಿ ಸಂಸ್ಥೆಯ ಅತ್ಯಾಧುನಿಕ ತಂತ್ರಜ್ಞಾನದ ಸುಸಜ್ಜಿತ ಕ್ಯಾನ್ಸರ್ ಆಸ್ಪತ್ರೆ ಲೋಕಾರ್ಪಣೆಗೊಳಿಸಿ ಮಾತನಾಡಿದರು. ಕೇಂದ್ರ ಸರ್ಕಾರ ಜನರ ಆರೋಗ್ಯ ಕಾಪಾಡಲು ಆಯುಷ್ಮಾನ್ ಭಾರತ್ ಆರೋಗ್ಯ ಯೋಜನೆ ಜಾರಿಗೆ ತಂದಿದ್ದು ಬಡವರಿಗೆ ದೊರೆಯುತ್ತಿದ್ದ ಈ ಸೌಕರ್ಯವನ್ನು ೭೦ ವರ್ಷ ಪೂರೈಸಿದ ಹಿರಿಯ ನಾಗರಿಕರಿಗೆ ವಿಸ್ತರಿಸಲಾಗಿದೆ ಎಂದರು ಜಗತ್ತಿನಾದ್ಯಂತ ೨೦ ಬಿಲಿಯನ್ ಜನರು ಕ್ಯಾನ್ಸರ್ ರೋಗದಿಂದ ಬಳಲುತ್ತಿದ್ದಾರೆ. ಇಂತಹ ಸುಸಜ್ಜಿತ ಆಸ್ಪತ್ರೆಗಳು ಸಾರ್ವಜನಿಕರಿಗೆ ಗುಣಮಟ್ಟದ ಚಿಕಿತ್ಸೆ ನೀಡುವಲ್ಲಿ ವಿಶೇಷ ಪಾತ್ರ ವಹಿಸಲಿದೆ ಎಂದರು.

ಕೇಂದ್ರ ಸಚಿವ ಪ್ರಹ್ಲಾದ್ ಜೋಷಿ ಮಾತನಾಡಿ, ತಪ್ಪು ಜೀವನವಿಧಾನ ಹಾಗೂ ಸಮತೋಲನ ಆಹಾರ ಕೊರತೆಯಿಂದಾಗಿ ಜನರು ಅನೇಕ ರೋಗಗಳಿಗೆ ತುತ್ತಾಗುತ್ತಿದ್ದಾರೆ. ದೇಶದಲ್ಲಿ ಶೇಕಡ ೧೨ ಪಾಯಿಂಟ್ ೮ ಜನ ಕ್ಯಾನ್ಸರ್ ರೋಗದಿಂದ ಬಳಲುತ್ತಿದ್ದಾರೆ. ಕೇಂದ್ರ ಸರ್ಕಾರ ಸಾರ್ವಜನಿಕ ಆರೋಗ್ಯ ಕಾಪಾಡಲು ವಿಶೇಷ ಆದ್ಯತೆ ನೀಡುತ್ತಿದೆ ಎಂದರು. ಇದಕ್ಕೂ ಮುನ್ನ ಬೆಂಗಳೂರಿನಲ್ಲಿರುವ ಮಾನಸಿಕ ಆರೋಗ್ಯ ಮತ್ತು ನರವಿಜ್ಞಾನಗಳ ಸಂಸ್ಥೆ-ನಿಮ್ಹಾನ್ಸ್‌ನ ಸುವರ್ಣ ಮಹೋತ್ಸವ ಸಮಾರಂಭದಲ್ಲಿ ಮಾತನಾಡಿ, ಮಾನಸಿಕ ಚಿಕಿತ್ಸೆ ಕ್ಷೇತ್ರದಲ್ಲಿ ಸಾಮಾಜಿಕ ಕಳಂಕ ಸವಾಲಾಗಿರುವ ಹಿನ್ನೆಲೆಯಲ್ಲಿ ಟೆಲಿ ಮಾನಸ್ ಮೂಲಕ ನಿಮ್ಹಾನ್ಸ್, ಜನಸಾಮಾನ್ಯರನ್ನು ತಲುಪುತ್ತಿದೆ. ಉತ್ತಮ ಗುಣಮಟ್ಟದ ಸಂಶೋಧನೆ ಮತ್ತು ಅಧ್ಯಯನ, ವ್ಯಾಸಂಗ ಕ್ಷೇತ್ರಗಳಲ್ಲಿ ತನ್ನದೇ ಆದ ಛಾಪು ಮೂಡಿಸಿದೆ ಎಂದು ರಾಷ್ಟ್ರಪತಿ ದ್ರೌಪದಿ ಮುರ್ಮು ಹೇಳಿದರು. ಸಾಂಪ್ರದಾಯಿಕ ಜ್ಞಾನಗಳಾದ ಯೋಗ ಮತ್ತು ಆಯುರ್ವೇದ ಶಾಸ್ತ್ರಗಳ ನೆರವಿನೊಂದಿಗೆ ಮಾನಸಿಕ ಆರೋಗ್ಯ ಚಿಕಿತ್ಸಾ ವಿಧಾನಗಳನ್ನು ನಿಮ್ಹಾನ್ಸ್ ಅಭಿವೃದ್ಧಿಪಡಿಸಿರುವುದು ಗಮನಾರ್ಹ. ಆತ್ಮಹತ್ಯೆಯಂತಹ ವಿಪರೀತದ ಸ್ಥಿತಿಗಳಿಗೆ ಹೋಗುವ ವ್ಯಕ್ತಿಗಳಿಗೆ ಮುಂಚಿತವಾಗಿಯೇ ಆಪ್ತ ಸಮಾಲೋಚನೆಯ ಮೂಲಕ ಸಾಂತ್ವನ ನೀಡಿ, ಜೀವ ಉಳಿಸುವ ಪ್ರಯತ್ನ ಮಾಡುತ್ತಿದೆ. ಟೆಲಿ ಮಾನಸ್ ವ್ಯವಸ್ಥೆ ಇದುವರೆಗೆ ೭೦ ಲಕ್ಷ ಜನರನ್ನು ತಲುಪಿದೆ ಎಂದು ರಾಷ್ಟ್ರಪತಿ ಹೇಳಿದರು.

ಕೇಂದ್ರ ಆರೋಗ್ಯ ಸಚಿವ ಜೆ.ಪಿ. ನಡ್ಡಾ ಮಾತನಾಡಿ, ನಿಮ್ಹಾನ್ಸ್‌ನ ಐದು ದಶಕಗಳ ಯಾತ್ರೆ ಶ್ಲಾಘನೀಯ ಎಂದರು. ನಿಮ್ಹಾನ್ಸ್, ಪ್ರತಿವರ್ಷ ಅಂದಾಜು ೭ ಲಕ್ಷ ಜನರಿಗೆ ಚಿಕಿತ್ಸೆ ನೀಡುತ್ತಿದೆ. ೨೧ ಲಕ್ಷ ಜನರಿಗೆ ಲ್ಯಾಬ್ ವ್ಯವಸ್ಥೆಯನ್ನು ತಲುಪಿಸಲಾಗಿದೆ. ಅತ್ಯಾಧುನಿಕ ಯಂತ್ರಗಳ ನೆರವಿನೊಂದಿಗೆ ಗುಣಮಟ್ಟದ ಚಿಕಿತ್ಸೆ ನೀಡಲಾಗುತ್ತಿದೆ ಎಂದರು.

**<><*<><>*><>**

ದೇಶವನ್ನು ವಿಶ್ವದ ಅತೀ ದೊಡ್ಡ ತಯಾರಿಕಾ ಕೇಂದ್ರವನ್ನಾಗಿಸಲು ಈ ವರ್ಷ ಒತ್ತು ನೀಡಲಾಗುವುದು ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ. ಅವರು ದೆಹಲಿಯಲ್ಲಿಂದು ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಶಂಕುಸ್ಥಾಪನೆ ಹಾಗೂ ಯೋಜನೆಗಳ ಲೋಕಾರ್ಪಣೆ ನೇರವೇರಿಸಿ ಮಾತನಾಡಿದರು. ೨೦೨೫ ನೇ ಸಾಲಿನಲ್ಲಿ ವಿಶ್ವದಲ್ಲಿ ಭಾರತದ ಸ್ಥಾನವನ್ನು ಬಲಪಡಿಸಲು ಕ್ರಮಕೈಗೊಳ್ಳಲಾಗುವುದು. ಈ ವರ್ಷ, ದೇಶ ವಿಶ್ವದ ಮೂರನೇ ಅತೀ ದೊಡ್ಡ ಆರ್ಥಿಕತೆಯಾಗಿ ಹೊರ ಹೊಮ್ಮುವಂತೆ ಮಾಡುವ ಪ್ರಯತ್ನ ಮುಂದುವರಿಯಲಿದೆ ಎಂದರು. ಕೊಳಗೇರಿಗಳಲ್ಲಿ ಪಕ್ಕಾ ಮನೆಗಳನ್ನು ನಿರ್ಮಿಸಲು ಕೇಂದ್ರ ಸರ್ಕಾರ ಆಂದೋಲನ ಕೈಗೊಂಡಿದೆ ಎಂದು ಅವರು ಹೇಳಿದರು.

ಅಶೋಕ್ ವಿಹಾರದಲ್ಲಿ  ದುರ್ಬಲ ವರ್ಗದವರಿಗೆ ನಿರ್ಮಿಸಲಾದ ೧ ಸಾವಿರ ೭೦೦ ಫ್ಲಾಟ್ ಗಳನ್ನು ಫಲಾನುಭವಿಗಳಿಗೆ ವಿತರಿಸಿ, ಸಂವಾದ ನಡೆಸಿದರು. ಇದೇ ಸಂದರ್ಭದಲ್ಲಿ ಪ್ರಧಾನಮಂತ್ರಿ ಅವರು ನವರೋಜಿ ನಗರದ ವಿಶ್ವ ವಾಣಿಜ್ಯ ಕೇಂದ್ರದಲ್ಲಿ ಎರಡು ನಗರ ಪುನರಾಭಿವೃದ್ಧಿ ಯೋಜನೆಗಳನ್ನು ಉದ್ಘಾಟಿಸಿದರು. ಸರೋಜಿನಿ ನಗರದ ಸರ್ಕಾ ಉದ್ಯೋಗಿಗಳಿಗಾಗಿ ನಿರ್ಮಿಸಲಾದ ಜಿಪಿಆರ್ ಎ ವಸತಿ ಗೃಹಗಳನ್ನು ಲೋಕಾರ್ಪಣೆಗೊಳಿಸಿದರು. ಈ ತಾಣದಲ್ಲಿ ಹಿಂದೆ ಇದ್ದ ವಸತಿ ಗೃಹಗಳ ಬದಲಾಗಿ ಹೊಸದಾಗಿ ಈ ಸಂಕೀರ್ಣಗಳನ್ನು ನಿರ್ಮಿಸಲಾಗಿದ್ದು ಇದರಿಂದ ೩೦ ಲಕ್ಷ ಚದರ ಅಡಿ ವಾಣಿಜ್ಯ ಸ್ಥಳವಕಾಶವೂ ದೊರೆತಂತಾಗಿದೆ. ಈ ಸಂಕೀರ್ಣ ಸೌರ ಶಕ್ತಿ ಉತ್ಪಾದನೆ, ಮಳೆ ನೀರು ಕೊಯ್ಲು, ಸೇರಿದಂತೆ ಅತ್ಯಾಧುನಿಕ ಸೌಲಭ್ಯಗಳನ್ನು ಒಳಗೊಂಡಿದೆ. ಜಿಪಿಆರ್ ಎ ವಸತಿ ಸಂಕೀರ್ಣದಲ್ಲಿ ಎರಡೂವರೆ ಸಾವಿರಕ್ಕೂ ಅಧಿಕ ವಸತಿ ಘಟಕಗಳಿವೆ. ಇದಲ್ಲದೆ ಪ್ರಧಾನ ಮಂತ್ರಿ, ದ್ವಾರಕದಲ್ಲಿ ೩೦೦ ಕೋಟಿ ರೂಪಾಯಿ ವೆಚ್ಚದಲ್ಲಿ ನಿರ್ಮಿಸಲಾದ ಕೇಂದ್ರೀಯ ಸಿಬಿಎಸ್ ಇ ಯ ಸಮಗ್ರ ಕಚೇರಿ ಸಂಕೀರ್ಣವನ್ನು ಲೋಕಾರ್ಪಣೆ ಮಾಡಿದರು. ದೆಹಲಿ ವಿಶ್ವವಿದ್ಯಾಲಯದಲ್ಲಿ ಸುಮಾರು ೬೦೦ ಕೋಟಿ ರೂಪಾಯಿ ವೆಚ್ಚದಲ್ಲಿ ನಿರ್ಮಿಸಲು ಉದ್ದೇಶಿಸಲಾಗಿರುವ ಮೂರು ಯೋಜನೆಗಳಿಗೆ ಶಂಕು ಸ್ಥಾಪನೆ ನೆರವೇರಿಸಿದರು. ನಝಾಫ್ ಘರ್‌ನ ರೋಶನ್ ಪುರದಲ್ಲಿ ನಿರ್ಮಿಸಲು ಉದ್ದೇಶಿಸಲಾಗಿರುವ ವೀರ ಸಾರ್ವಕರ್ ಕಾಲೇಜು, ದೆಹಲಿ ವಿಶ್ವವಿದ್ಯಾಲಯದ ಸೂರಜ್ ಮಲ್ ವಿಹಾರ ಹಾಗೂ ದ್ವಾರಕದಲ್ಲಿ ಶೈಕ್ಷಣಿಕ ವಿಭಾಗದ ಕಟ್ಟಡಗಳಿಗೆ ಅಡಿಗಲ್ಲು ಕಾರ್ಯಕ್ರಮ ನೆರವೇರಿಸಿದರು.

**<><*<><>*><>**

ದೇಶದ ೧೦೦ ಸ್ಥಳಗಳಲ್ಲಿ ಶೀಘ್ರದಲ್ಲೇ ಆಯುಷ್ ಕೇಂದ್ರಗಳನ್ನು ಸ್ಥಾಪಿಸಲಾಗುವುದು ಎಂದು ಕೇಂದ್ರ ಆರೋಗ್ಯ ಸಚಿವ ಜಯಪ್ರಕಾಶ್ ನಡ್ಡಾ ಘೋಷಿಸಿದ್ದಾರೆ. ಅವರು, ಬೆಂಗಳೂರಿನಲ್ಲಿಂದು ಖಾಸಗಿ ಶಿಕ್ಷಣ ಸಂಸ್ಥೆಯ ಕಾರ್ಯಕ್ರಮದಲ್ಲಿ ಮಾತನಾಡಿ, ಆಯುಷ್ ಸಂಶೋಧನಾ ಕೇಂದ್ರಗಳು- ದತ್ತಾಂಶ ಸಂಗ್ರಹ ಮತ್ತು ಸಂಶೋಧನೆಯಲ್ಲಿ ನಿರತವಾಗಿವೆ. ಗುಜರಾತ್ ನ ಜಾಮ್ ನಗರದಲ್ಲಿ ಸ್ಥಾಪಿಸಲಾಗಿರುವ ವಿಶ್ವ ಮಟ್ಟದ ಆಯುರ್ವೇದ ಸಂಶೋಧನಾ ಕೇಂದ್ರವನ್ನು ವಿಶ್ವ ಆರೋಗ್ಯ ಸಂಸ್ಥೆ ಗುರುತಿಸಿದೆ ಎಂದರು. ಕರ್ನಾಟಕದ ನೆಲಮಂಗಲ ಮತ್ತು ಒಡಿಶಾದಲ್ಲಿ ಈಗಾಗಲೇ ಕೇಂದ್ರೀಯ ಆಯುರ್ವೇದ ಸಂಶೋಧನಾ ಸಂಸ್ಥೆ- ಅಂಖI ಗಳನ್ನು ಸ್ಥಾಪಿಸಲಾಗಿದೆ. ಶೀಘ್ರದಲ್ಲೇ ಆಂಧ್ರ ಪ್ರದೇಶ ಮತ್ತು ಕೇರಳದಲ್ಲಿ ಕೇಂದ್ರೀಯ ಆಯುರ್ವೇದ ಸಂಶೋಧನಾ ಸಂಸ್ಥೆಗಳನ್ನು ಸ್ಥಾಪಿಸಲಾಗುವುದು ಎಂದು ಅವರು ಮಾಹಿತಿ ನೀಡಿದರು.

**<><*<><>*><>**

ಭಾರತ, ೧೧೦ ಕ್ಕೂ ಅಧಿಕ ಯೂನಿಕಾರ್ನ್ ಸ್ಟಾರ್ಟ್‌ಅಪ್‌ಗಳನ್ನು ಹೊಂದಿದ್ದು, ನವೋದ್ಯಮಗಳಿಗೆ ಅಗತ್ಯವಿರುವ ಪರಿಸರವನ್ನು ಹೊಂದಿದ ವಿಶ್ವದ ಮೂರನೇ ಅತಿ ದೊಡ್ಡ ದೇಶವಾಗಿದೆ ಎಂದು ವಾಣಿಜ್ಯ ಮತ್ತು ಉದ್ಯಮ ಖಾತೆ ಸಚಿವ ಪಿಯುಷ್ ಗೋಯಲ್ ಹೇಳಿದ್ದಾರೆ. ಅವರು, ನವದೆಹಲಿಯಲ್ಲಿಂದು ಸುದ್ದಿಗಾರರೊಂದಿಗೆ ಮಾತನಾಡಿ, ಕಳೆದ ೯ ವರ್ಷಗಳಲ್ಲಿ ನವೋದ್ಯಮಗಳು ಸಾಗಿಬಂದ ದಾರಿ ಸ್ಫೂರ್ತಿದಾಯಕ ಎಂದು ಹೇಳಿದರು.

**<><*<><>*><>**

ಬ್ರಹ್ಮಪುತ್ರಾ ನದಿಯ, ಮೇಲಿನ ಪ್ರದೇಶದಲ್ಲಿರುವ ಚಟುವಟಿಕೆಗಳು ನದಿಯ ಕೆಳಭಾಗದ ಪ್ರದೇಶಗಳಿಗೆ ಅಪಾಯ ಒಡ್ಡದಂತೆ ಖಾತರಿಪಡಿಸಬೇಕೆಂದು ಭಾರತ ಚೀನಾವನ್ನು ಆಗ್ರಹಿಸಿದೆ. ವಿದೇಶಾಂಗ ಸಚಿವಾಲಯದ ವಕ್ತಾರ ರಣಧೀರ್ ಜೈಸ್ವಾಲ್ ದೆಹಲಿಯಲ್ಲಿಂದು ಸುದ್ದಿಗಾರರಿಗೆ ಈ ವಿಷಯ ತಿಳಿಸಿದ್ದಾರೆ. ಚೀನಾದ ಟಿಬೆಟ್ ಸ್ವಾಯತ್ತ ಪ್ರದೇಶದಲ್ಲಿ ಎರ್ಲಾಂಗ್ ಸ್ಯಾಂಗ್ ಪೋ ನದಿಯಿಂದ ಜಲ ವಿದ್ಯುತ್ ಯೋಜನೆ ಕೈಗೊಂಡಿರುವ ಹಿನ್ನೆಲೆಯಲ್ಲಿ ಕೇಳಲಾದ ಪ್ರಶ್ನೆಗೆ ನದಿಯ ಕೆಳಭಾಗದ ಫಲಾನುಭವಿ ದೇಶವಾಗಿ ನದಿಯ ನೀರನ್ನು ಬಳಸಿಕೊಳ್ಳಲು ಎಲ್ಲಾ ಹಕ್ಕು ಹೊಂದಿದೆ ಎಂದು ಹೇಳಿದರು.

**<><*<><>*><>**

ವಿದೇಶಾಂಗ ವ್ಯವಹಾರಗಳ ಸಚಿವ ಡಾ.ಎಸ್.ಜೈಶಂಕರ್ ಮತ್ತು ಮಾಲ್ಡೀವ್ಸ್ ವಿದೇಶಾಂಗ ವ್ಯವಹಾರಗಳ ಸಚಿವ ಅಬ್ದುಲ್ ಖಲೀಲ್ ನಡುವೆ ನವದೆಹಲಿಯಲ್ಲಿಂದು ನಿಯೋಗ ಮಟ್ಟದ ಮಾತುಕತೆ ನಡೆಯಿತು. ಡಾ.ಎಸ್.ಜೈಶಂಕರ್ ಅವರು ಸಭೆಯಲ್ಲಿ ಮಾತನಾಡಿ, ಎರಡು ದೇಶಗಳು ವಿವಿಧ ಕ್ಷೇತ್ರಗಳಲ್ಲಿ ತಮ್ಮ ತೊಡಗಿಸಿಕೊಳ್ಳುವಿಕೆಯನ್ನು ಹೆಚ್ಚಿಸಿವೆ. ಭಾರತ ಮಾಲ್ಡೀವ್ಸ್‌ಗೆ ಬೆಂಬಲವಾಗಿ ನಿಂತಿದೆ. ಅಗತ್ಯ ವಸ್ತುಗಳ ರಫ್ತಿಗೆ ಭಾರತ ಅನುಕೂಲ ಮಾಡಿಕೊಟ್ಟಿದೆ ಎಂದು ಹೇಳಿದರು.

**<><*<><>*><>**

ಕಳೆದ ಮೂರು ದಿನಗಳಲ್ಲಿ ವಂದೇ ಭಾರತ್ ಸ್ಲೀಪರ್ ರೈಲು ಪ್ರಯೋಗಾರ್ಥ ಪರೀಕ್ಷೆಯಲ್ಲಿ ಗಂಟೆಗೆ ೧೮೦ ಕಿಮೀ ಗರಿಷ್ಠ ವೇಗ ಸಾಧಿಸಿದೆ ಎಂದು ರೈಲ್ವೇ ಇಲಾಖೆ ತಿಳಿಸಿದೆ. ವಿಮಾನ ವಿನ್ಯಾಸದಂತೆ ಅತ್ಯಾಧುನಿಕ ಸೌಲಭ್ಯ ಹೊಂದಿರುವ ವಂದೇ ಭಾರತ್ ಸ್ಲೀಪರ್ ರೈಲು ಪ್ರಯೋಗಾರ್ಥ ಪರೀಕ್ಷೆಯ ವಿಡಿಯೋವನ್ನು ಕೇಂದ್ರ ರೈಲ್ವೇ ಸಚಿವ ಅಶ್ವಿನಿ ವೈಷ್ಣವ್ ಹಂಚಿಕೊಂಡಿದ್ದಾರೆ.

**<><*<> ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು <>*><>**

**<><*<>ನಮ್ಮ ಮುಂದಿನ ವಾರ್ತಾ ಪ್ರಸಾರ ನಾಳೆ ಬೆಳಗ್ಗೆ ೭.೦೫ ಕ್ಕೆ <>*><>**